ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 25.01.2024.**

**ಮುಂದುವರೆದ ಪಾಟೀ ಸವಾಲು - 2** ರಿಂದ **6** ನೇ ಪ್ರತಿವಾದಿಗಳ ಪರ ವಕೀಲರಿಂದಃ

9) ನಿಪಿ-11 ಟಿ.ಸಿ. ಯನ್ನು ನಾನು ದೊಡ್ಡಕುರುಬರಹಳ್ಳಿಯ ಶಾಲೆಯಿಂದ ಪಡೆದುಕೊಂಡೆ. ನನ್ನಿಂದ ಸದರಿ ಶಾಲೆಯ ಮುಖ್ಯೋಪಾಧ್ಯಾಯರನ್ನು ಸಾಕ್ಷಿ ಹೇಳಿಕೆ ಮಾಡಿಸಲು ತೊಂದರೆ ಇಲ್ಲ ಎಂದರೆ ಸರಿ. ನಿಪಿ-11 ನ್ನು ಯಾವಾಗ ಪಡೆದಿದ್ದೇನೆ ಎಂದು ನನಗೆ ಗೊತ್ತಿಲ್ಲ. ಇದನ್ನು ದಿನಾಂಕಃ 16.03.2016 ರಂದು ಪಡೆದುಕೊಂಡಿದ್ದೇನೆ ಎಂದರೆ ಸರಿ. ನಿಪಿ-13 ರಲ್ಲಿ ಬಚ್ಚಪ್ಪ ಬಿನ್ ರಾಮಣ್ಣ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಬಚ್ಚಪ್ಪ ಬಿನ್ ರಾಮಣ್ಣ ನನ್ನ ಅಜ್ಜಿಯ ತಮ್ಮನ ಮಗ ನನಗೆ ಮಾವನಾಗಬೇಕು. ಸದರಿ ಬಚ್ಚಪ್ಪ ಬಿನ್ ರಾಮಣ್ಣನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನಿಪಿ-13 ರ 3 ನೇ ಪುಟದಲ್ಲಿ ಆರ್.ಗೋಪಾಲಪ್ಪ ಎಂದು ನಮೂದಾಗಿದೆ ಎಂದರೆ ಆತ ಬಚ್ಚಪ್ಪ ಬಿನ್ ರಾಮಣ್ಣನ ಅಣ್ಣ-ತಮ್ಮ ಇದ್ದು, ಆತ ಕೂಡ ನನಗೆ ಮಾವನಾಗಬೇಕು. ಆರ್.ಗೋಪಾಲಪ್ಪನನ್ನು ಕೂಡ ನಾನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನಿಪಿ-14 ರ ಪಹಣಿಯಲ್ಲಿ ನಮೂದಾಗಿರುವ ಬೈಯ್ಯಮ್ಮ ನನಗೆ ಅಜ್ಜಿಯಾಗಬೇಕು, ಆಕೆ ನನ್ನ ತಂದೆಯ ತಾಯಿ ಇರುತ್ತಾರೆ. ನಿಪಿ-14 ರಲ್ಲಿ ನನ್ನ ತಂದೆ ಹನುಮಪ್ಪ ಬಿನ್ ಮುನಿಶಾಮಪ್ಪ ರವರ ಹೆಸರನ್ನು Round up ಮಾಡಿ ಚನ್ನಕೃಷ್ಣಪ್ಪ, ಮುನಿಶಾಮಿ ಗೌಡ ಹಾಗೂ ಪ್ರವೀಣ ಕುಮಾರ್ ರವರ ಹೆಸರುಗಳನ್ನು 1996 ರಲ್ಲಿ ಸೇರಿಸಲಾಗಿದೆ ಎಂದರೆ ಸರಿ. ನಿಪಿ-15 ಪಹಣಿಯಲ್ಲಿ ಅದರ ಸರ್ವೆ ನಂಬರ್ ಕಾಣುತ್ತಿಲ್ಲ ಎಂದರೆ ಸರಿ. ನಿಪಿ-15 ರ ಪಹಣಿಯಲ್ಲಿ ಕೂಡ 1996 ರಲ್ಲೇ ಚನ್ನಕೃಷ್ಣಪ್ಪ, ಮುನಿಶಾಮಿ ಗೌಡ ಹಾಗೂ ಪ್ರವೀಣ ಕುಮಾರ್ ರವರ ಹೆಸರುಗಳನ್ನು ಸೇರಿಸಲಾಗಿದೆ ಎಂದರೆ ಸರಿ. ನಿಪಿ-16 ರ ಪಹಣಿಯಲ್ಲಿ ಕೂಡ ಅದರ ಸರ್ವೆ ನಂಬರ್ ಕಾಣುತ್ತಿಲ್ಲ ಎಂದರೆ ಸರಿ. ನಿಪಿ-16 ರ ಪಹಣಿಯಲ್ಲಿ ಕೂಡ 1996 ರಲ್ಲೇ ಚನ್ನಕೃಷ್ಣಪ್ಪ, ಮುನಿಶಾಮಿ ಗೌಡ ಹಾಗೂ ಪ್ರವೀಣ ಕುಮಾರ್ ರವರ ಹೆಸರುಗಳನ್ನು ಸೇರಿಸಲಾಗಿದೆ ಎಂದರೆ ಸರಿ.

ನಿಪಿ-17 ರಲ್ಲೂ ಕೂಡ 1997 ರಲ್ಲಿ ಚನ್ನಕೃಷ್ಣಪ್ಪ, ಮುನಿಶಾಮಿ ಗೌಡ ಹಾಗೂ ಪ್ರವೀಣ ಕುಮಾರ್ ರವರ ಹೆಸರುಗಳನ್ನು ಸೇರಿಸಲಾಗಿದೆ ಎಂದರೆ ಸರಿ. ನಿಪಿ-18 ರಲ್ಲೂ ಕೂಡ 1997 ರಲ್ಲಿ ಚನ್ನಕೃಷ್ಣಪ್ಪ, ಮುನಿಶಾಮಿ ಗೌಡ ಹಾಗೂ ಪ್ರವೀಣ ಕುಮಾರ್ ರವರ ಹೆಸರುಗಳನ್ನು ಸೇರಿಸಲಾಗಿದೆ ಎಂದರೆ ಸರಿ. ನಿಪಿ-19 ರಲ್ಲೂ ಕೂಡ 1997 ರಲ್ಲಿ ಚನ್ನಕೃಷ್ಣಪ್ಪ, ಮುನಿಶಾಮಿ ಗೌಡ ಹಾಗೂ ಪ್ರವೀಣ ಕುಮಾರ್ ರವರ ಹೆಸರುಗಳನ್ನು ಸೇರಿಸಲಾಗಿದೆ ಎಂದರೆ ಸರಿ. ನಾನು ನನ್ನ ತಂದೆಯ ಆಸ್ತಿಗಳ ವಿರುದ್ಧ ಹಾಕಿದ ಈ ದಾವೆಯಲ್ಲಿ ಮನೆಗಳನ್ನು ಸೇರಿಸಿಲ್ಲ ಎಂದರೆ ಸರಿ. ಈಗ ತೋರಿಸಿದ ಮದುವೆಯ ಆಮಂತ್ರಣ ಪತ್ರಿಕೆ ನೋಡಿದೆ, ಇದು ನನ್ನ ಮದುವೆಯ ಆಮಂತ್ರಣ ಪತ್ರಿಕೆ ಇದ್ದು, ದಿನಾಂಕಃ 31.05.1978 ರಂದು ನನ್ನ ಮದುವೆ ನಡೆದಿತ್ತು ಎಂದರೆ ಇರಬಹುದು ಎಂದಿದ್ದರಿಂದ ಅದನ್ನು **ನಿಡಿ-1 ಎಂದು ಗುರುತಿಸಿತು.** ಈಗ ತೋರಿಸಿದ ಜೆರಾಕ್ಸ್ ಮರಣ ಪ್ರಮಾಣ ಪತ್ರದ ಪ್ರಕಾರ ನನ್ನ ತಂದೆ ಹನುಮಪ್ಪನು ದಿನಾಂಕಃ 15.12.1996 ರಂದು ಮೃತಪಟ್ಟಿದ್ದಾರೆ ಎಂದರೆ ಸರಿ ಎಂದಿದ್ದಾರೆ. ನನಗೆ ಪಾಲು ವಿಭಾಗದ ಹಕ್ಕು ಇಲ್ಲದೇ ಇದ್ದರೂ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲಾ.**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**